# ಸಿನಿ ಪ್ರಿಯರಿಗೆ ಸಿನಿ ಡಬ್ಸ್ ಸಿಹಿ!

**ಸ್ಯಾಂಡಲ್‌ವುಡ್ ಹೊಸ ತಂತ್ರಜ್ಞಾನಕ್ಕೆ ತೆರೆದುಕೊಳ್ಳಲು ಉತ್ಸುಕವಾಗಿದೆ ಎಂಬುದಕ್ಕೆ 'ವಿಕ್ರಾಂತ್ ರೋಣ' ಸಿನಿಮಾ ತಾಜಾ ಉದಾಹರಣೆ. ಚಿತ್ರಮಂದಿರದಲ್ಲಿ ಕೂತು ಇಷ್ಟದ ಭಾಷೆಯಲ್ಲಿ ಸಿನಿಮಾದ ಆಡಿಯೊ ಟ್ರ್ಯಾಕ್ ಕೇಳುವ ಅವಕಾಶವನ್ನು ಚಿತ್ರತಂಡ ಕಲ್ಪಿಸಿದ್ದು, ಇದಕ್ಕೆ ಸಿನಿ ಡಬ್ಸ್ ಎಂಬ ಆ್ಯಪ್ ಸಾಥ್ ಕೊಟ್ಟಿದೆ.**

■ **ಶಶಿಕುಮಾರ್ ಸಿ.**




ಸುದೀಪ್ ಅಭಿನಯದ ವಿಕ್ರಾಂತ್ ರೋಣ ಸಿನಿಮಾದ ಪ್ರೀಮಿಯರ್ ಶೋ ಟಿಕೆಟ್‌ಗಳನ್ನು ಎನ್‌ಎಫ್‌ಟಿ (ನಾನ್ ಫಂಜಿಬಲ್ ಟೋಕನ್) ಮೂಲಕ ನೀಡಿ ಅತ್ಯಾಧುನಿಕ ತಂತ್ರಜ್ಞಾನಕ್ಕೆ ಚಿತ್ರತಂಡವು ತನ್ನನ್ನು ತೆರೆದುಕೊಂಡಿತ್ತು. ಇದೇ ವೇಳೆ ಚಿತ್ರತಂಡವು 'ಸಿನಿ ಡಬ್ಸ್' ಅನ್ನುವ ಹೊಸ ಆ್ಯಪ್ ಪರಿಚಯಿಸಿತ್ತು. ಇದೀಗ ಕನ್ನಡ ಚಿತ್ರರಂಗದಲ್ಲಿ ಸುದ್ದಿಯಲ್ಲಿದೆ.

ಕನ್ನಡ, ತಮಿಳು, ತೆಲುಗು, ಮಲಯಾಳಂ ಹಾಗೂ ಹಿಂದಿ ಜೊತೆಗೆ ಇಂಗ್ಲಿಷ್, ಸ್ಪ್ಯಾನಿಶ್ ಮತ್ತು ಜರ್ಮನಿ ಭಾಷೆಗಳಿಗೆ ಡಬ್ ಆದ 'ವಿಕ್ರಾಂತ್ ರೋಣ' ಸಿನಿಮಾವನ್ನು ಚಿತ್ರಮಂದಿರದಲ್ಲಿ ಕುಳಿತ ಪ್ರೇಕ್ಷಕ ತನ್ನಿಷ್ಟದ ಭಾಷೆಯಲ್ಲಿ ಸಿನಿಮಾದ 360 ಡಿಗ್ರಿ ಇಮ್ಮರ್ಸಿವ್ ಸೌಂಡ್‌ಟ್ರ್ಯಾಕ್ ಅನ್ನು ಆಲಿಸಬಹುದು. ಇದು ಸಿನಿ ಡಬ್ಸ್ ಆ್ಯಪ್‌ನ ವಿಶೇಷ. ಗೂಗಲ್ ಪ್ಲೇಸ್ಟೋರ್‌ನಲ್ಲಿ ಈ ಆ್ಯಪ್ ಉಚಿತವಾಗಿ ಲಭ್ಯವಿದೆ.

ಹಲವು ಭಾಷೆಗಳಲ್ಲಿ ಡಬ್ ಆಗಿರುವ ಸಿನಿಮಾವೊಂದನ್ನು ಚಿತ್ರಮಂದಿರದಲ್ಲಿ ಕುಳಿತು ಒಂದಕ್ಕಿಂತ ಹಲವು ಭಾಷೆಗಳಲ್ಲಿ (ಏಕಕಾಲದಲ್ಲಿ ಒಂದು ಭಾಷೆ) ಕೇಳುವ ತಂತ್ರಜ್ಞಾನವನ್ನು ಸಿನಿ ಡಬ್ಸ್ ಆ್ಯಪ್ ಅಳವಡಿಸಿಕೊಂಡಿದೆ. ನಮಗೆ ಬೇಕಾದ ಭಾಷೆಯಲ್ಲಿ ಸಿನಿಮಾದ ಆಡಿಯೊ ಟ್ರ್ಯಾಕ್ ಕೇಳಬೇಕಾದರೆ 'ಸಿನಿ ಡಬ್' ತೆರೆದು ಲೊಕೇಷನ್, ನೀವು ನೋಡುತ್ತಿರುವ ಸಿನಿಮಾ, ಪ್ರದರ್ಶನದ ಸಮಯ ಮತ್ತು ನಿಮಗೆ ಬೇಕಾದ ಭಾಷೆಯನ್ನು ಆಯ್ಕೆ ಮಾಡಿಕೊಳ್ಳಬೇಕು. ಇಷ್ಟು ಪ್ರಕ್ರಿಯೆಯನ್ನು ಚಿತ್ರಮಂದಿರಕ್ಕೆ ಕಾಲಿಟ್ಟ ಕೂಡಲೇ ಮಾಡಿಕೊಂಡರೆ ಹೆಚ್ಚು ಅನುಕೂಲ.

ಪರದೆಯ ಮೇಲೆ ಪ್ರಸಾರಗೊಳ್ಳುವ ದೃಶ್ಯಗಳಿಗೆ ಹೊಂದಿಕೊಂಡು ಸ್ವಯಂಚಾಲಿತವಾಗಿ ಸಿಂಕ್ ಆಗಿ ಸಂಭಾಷಣೆ, ಸಂಗೀತವನ್ನು ತಮಗೆ ಬೇಕಾದ ಭಾಷೆಯಲ್ಲಿ ಇಯರ್ ಫೋನ್ ಬಳಸಿ ಪ್ರೇಕ್ಷಕರು ಕೇಳಬಹುದು. ಸಹಜವಾಗಿ ಸಿನಿಮಾ ನೋಡಿದಾಗ ಸಿಗುವಷ್ಟೇ ಅನುಭವವು ಈ ವಿಧಾನದಲ್ಲೂ ಸಿಗುತ್ತದೆ. ಧ್ವನಿಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ. ಸಿನಿಮಾವನ್ನು ಇನ್ನಷ್ಟು ಆಸಕ್ತಿಯಿಂದ ನೋಡಲು ಇದು ನೆರವಾಗುತ್ತದೆ. ಚಿತ್ರಮಂದಿರದ ಒಳಗೆ ಮಾತ್ರ ಈ ಆ್ಯಪ್ ಚಾಲ್ತಿಗೊಳ್ಳುತ್ತದೆ. ಹೊರಗಡೆ ಇದು ಸಾಧ್ಯವಿಲ್ಲ.

ಉದಾಹರಣೆಗೆ, ಬಹುಭಾಷೆಯಲ್ಲಿ ಬಿಡುಗಡೆಯಾದ ವಿಕ್ರಾಂತ್ ರೋಣ ಸಿನಿಮಾ ನೋಡಲು ನೀವು ಮಲ್ಟಿಪ್ಲೆಕ್ಸ್ ಅಥವಾ ಚಿತ್ರಮಂದಿರಕ್ಕೆ ಹೋಗುತ್ತೀರಿ ಎಂದಿಟ್ಟುಕೊಳ್ಳೋಣ. ಅಲ್ಲಿ ನೀವು ನೋಡಬಯಸುವ ಆವೃತ್ತಿಯ ಸಿನಿಮಾದ ಟಿಕೆಟ್ ಇಲ್ಲ ಎಂದಿಟ್ಟುಕೊಳ್ಳಿ ಅಥವಾ ಎಲ್ಲ ಟಿಕೆಟ್‌ಗಳು ಖಾಲಿಯಾಗಿ ನಿಮಗೆ ಗೊತ್ತಿಲ್ಲದ ಭಾಷೆಯ ವಿಕ್ರಾಂತ್ ರೋಣ ಆವೃತ್ತಿಯ ಟಿಕೆಟ್ ಮಾತ್ರ ಇದೆ ಎಂದಿಟ್ಟುಕೊಳ್ಳಿ. ಅದು ನಿಮಗೆ ಒಂಚೂರು ಅರ್ಥವಾಗದ ಭಾಷೆಯೇ ಆಗಿರಬಹುದು. ಅಂತಹ ಸಮಯದಲ್ಲಿ ಆ ಟಿಕೆಟ್ ಪಡೆದು ಒಳಹೊಕ್ಕು ಸಿನಿಡಬ್ಸ್ ಆ್ಯಪ್ ತೆರೆದು ಅಗತ್ಯ ಮಾಹಿತಿ ಪೂರೈಸಿ ಕನೆಕ್ಟ್ ಮಾಡಿಕೊಂಡರೆ ನಿಮಗಿಷ್ಟದ ಭಾಷೆಯಲ್ಲಿ ಸಿನಿಮಾದ ಆಡಿಯೊ ಟ್ರ್ಯಾಕ್ಸ್ ಅನ್ನು ಕೇಳಬಹುದು. ಕನ್ನಡದ ಮಟ್ಟಿಗೆ ಈಗೀಗ ಪರಿಚಯವಾಗುತ್ತಿರುವ ಆ್ಯಪ್ ಇದಾಗಿದ್ದು, 'ವಿಕ್ರಾಂತ್ ರೋಣ'ನ ಎಲ್ಲ ಆವೃತ್ತಿಗಳ ಆಡಿಯೊ ಟ್ರ್ಯಾಕ್ ಈ ಆ್ಯಪ್‌ನಲ್ಲಿ ಲಭ್ಯವಿದೆ.




ನಿಮ್ಮಿಷ್ಟದ ಭಾಷೆಯಲ್ಲಿ ಸಿನಿಮಾದ ಆಡಿಯೊ ಟ್ರ್ಯಾಕ್ ಕೇಳಬೇಕು ಎಂದರೆ ಮೊದಲು ಅದು ಆ ಭಾಷೆಗೆ ಡಬ್ ಆಗಿರಬೇಕು. ಕನಿಷ್ಠ ನಾಲ್ಕು ಭಾಷೆಗಳಲ್ಲಿ ಡಬ್ ಆಗಿರುವ ಸಿನಿಮಾದ ಆಡಿಯೊ ಟ್ರ್ಯಾಕ್ ಸಿನಿ ಡಬ್ಸ್ ಆ್ಯಪ್‌ನಲ್ಲಿ ಲಭ್ಯ. ಪೈರೇಟೆಡ್ (ನಕಲು ಪ್ರತಿ) ಪ್ರತಿಗಳನ್ನು ವೀಕ್ಷಿಸುವುದಿದ್ದರೆ ಈ ಆ್ಯಪ್ ಕೆಲಸ ಮಾಡುವುದಿಲ್ಲ. ನಿಗದಿತ ದಿನದಂದೇ ಸಿನಿಮಾ ನೋಡಬೇಕೆನ್ನುವವರಿಗೆ, ತಮ್ಮ ಭಾಷೆಯ ಆವೃತ್ತಿಯ ಟಿಕೆಟ್ ಸಿಗದಿದ್ದವರಿಗೆ ಯಾವುದೇ ಭಾಷೆಯ ಆವೃತ್ತಿ ನೋಡಿದರೂ ತಮ್ಮ ಭಾಷೆಯಲ್ಲಿ ಅದನ್ನು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ. ಸಿನಿಮಾ ಮಾರುಕಟ್ಟೆ ವಿಸ್ತರಣೆ, ಹೆಚ್ಚು ಹೆಚ್ಚು ಪ್ರೇಕ್ಷಕರನ್ನು ಚಿತ್ರಮಂದಿರದತ್ತ ಕರೆದೊಯ್ಯಲು ಇದು ಸಹಕಾರಿ.

**https://www.cinedubs.com**